**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 11/2016
ಪಿಡಬ್ಲು : 3 ಸಿಡಬ್ಲು : 1

| | | |
|---|---|---|
| ಸಾಕ್ಷಿಯ ಹೆಸರು | : | ಪ್ರಭಾಕರ ಅಸುದೆ |
| ತಂದೆಯ ಹೆಸರು | : | ಪ್ರಕಾಶ ಅಸುದೆ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ್ತವ್ಯ | : | ಮೊರಬ , ತಾಲೂಕು ರಾಯಬಾಗ |
| ದಿನಾಂಕ | : | 16-04-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 4 ರಿಂದ ಚಾಸಾಃ 7 ರವರು ನನಗೆ ಪರಿಚಯ ಇರುತ್ತಾರೆ. ಚಾಸಾಃ 8 ದಿವಾಕರ ನನ್ನ ಅಣ್ಣ. 1 ರಿಂದ 11 ಆರೋಪಿತರು ನನಗೆ ಗೊತ್ತಿರುತ್ತಾರೆ. ಅವರು ನಮ್ಮ ಊರಿನವರು. ನಾನು ಪರಿಶಿಷ್ಟ ಜಾತಿಯ ಹಿಂದೂ ಹೊಲೆರ ಜಾತಿಗೆ ಸೇರಿದ್ದೇನೆ. ಆರೋಪಿತರು ಲಿಂಗಾಯತ ಜಾತಿಗೆ ಸೇರಿದ್ದಾರೆ.

2. ನಾನು ಪಾನ್ ಶಾಪ ನಡೆಸುತ್ತೇನೆ. ಮೊರಬದಲ್ಲಿರುವ ಅಂಬೇಡ್ಕರ ವೃತ್ತದಲ್ಲಿ ನನ್ನ ಪಾನ್ ಶಾಪ ಇರುತ್ತದೆ. ನಾನು ನನ್ನ ಅಂಗಡಿಯನ್ನು ಬೆಳಗ್ಗೆ 08.00 ಗಂಟೆಯಿಂದ ರಾತ್ರಿ 09.30 ಗಂಟೆಯವರೆಗೆ ತೆರೆದಿರುತ್ತೇನೆ.

3. ದಿನಾಂಕಃ 01-10-2015 ರಂದು ಬೆಳಗ್ಗೆ 11:00 ಗಂಟೆ ಸಮಯಕ್ಕೆ ಅಣ್ಣಪ್ಪ ಹಳಿಜೋಳ ಇವರು ನಮ್ಮ ಅಂಗಡಿಗೆ ಬಂದಿದ್ದರು. ಅವರು ತಿನ್ನಲು ಪಾನ ಕೇಳಿದರು, ನಾನು ಕೊಟ್ಟೆನು. ಅವರು ಪಾನ್ ತಿನ್ನುತ್ತಾ ಕಾರಿನಲ್ಲಿ ಕುಳಿತರು, ನಾನು ಅವರನ್ನು ಹಣ ನೀಡುವಂತೆ ಕೇಳಿದೆನು. ಅಷ್ಟಕ್ಕೆ ಅವರು ನನಗೆ ಜಾತಿ ಹೆಸರು ಹಿಡಿದು, ನನಗೆ ಹಣ

ಕೇಳುತ್ತಿಯಾ ಎಂದು ಅವಾಚ್ಯವಾಗಿ ಬೈಯ್ದು, ಸಂಜೆಗೆ ಬಂದು ನೋಡಿಕೊಳ್ಳುತ್ತೇನೆ ಎಂದು ಹೇಳಿ ಹೋದರು. ಆ ದಿನ ರಾತ್ರಿ ನಾನು ಮನೆಗೆ ಹೋಗಿ ಊಟ ಮಾಡಿ ಪುನಃ ಚಾಸಾಃ 4 ದಿಲಿಪ ಇವರ ಟೇಲರ ಅಂಗಡಿಗೆ ಬಂದು ನಾನು, ಚಾಸಾಃ 4 ದಿಲಿಪ, ಚಾಸಾಃ5 ಚನ್ನಪ್ಪ ಟೇಲರ ಇವರು ಅಂಗಡಿಯಲ್ಲಿ ಮಲಗಿಕೊಂಡೆವು.

4. ಅಣ್ಣಪ್ಪ ಹಳಿಜೋಳ ಮತ್ತು ಅವರ ಕುಟುಂಬದವರು ನಮ್ಮ ಮನೆಗೆ ಹೋಗಿ ನನ್ನ ಅಣ್ಣನ ಬಳಿ ನನ್ನ ಬಗ್ಗೆ ವಿಚಾರಿಸಿದ್ದಾರೆ ಎಂದು ನನ್ನ ಅಣ್ಣ ನನಗೆ ಹೇಳಿದನು. ಆಗ ಸಮಯ ರಾತ್ರಿ 10:30 ರಿಂದ 11:00 ಗಂಟೆ ಆಗಿತ್ತು. ಆ ಸಮಯದಲ್ಲಿ ಅಣ್ಣಪ್ಪ ಹಳಿಜೋಳ ಮತ್ತು ಅವರ ಗ್ಯಾಂಗದವರು ಟೇಲರ ಅಂಗಡಿಯ ಬಳಿ ಬಾಗಿಲು ಬಡಿಯುತ್ತಿದರು. ಚಾಸಾಃ 5 ಚನ್ನಪ್ಪ ಹೋಗಿ ಬಾಗಿಲು ತೆರೆದರು, ಆಗ ಅಂಗಡಿಯ ಒಳಗೆ ಆರೋಪಿತರು ನುಗ್ಗಿದ್ದರು. ಆರೋಪಿತರು ನನಗೆ ಜಾತಿ ಹೆಸರು ಹಿಡಿದು ಅವಾಚ್ಯವಾಗಿ ಬೈಯಲು ಪ್ರಾರಂಭಿಸಿದರು ಮತ್ತು ನನಗೆ ಎಳೆದಾಡಿ ಹೊಡೆದರು. ಚನ್ನಪ್ಪ ಮತ್ತು ದಿಲಿಪ ನನಗೆ ಬಿಡಿಸಲು ಬಂದರು ಅವರಿಗೂ ಸಹ ಆರೋಪಿತರು ಏಳೆದಾಡಿ ಹೊಡೆಯಲು ಪ್ರಾರಂಭ ಮಾಡಿದರು. 1ನೇ ಆರೋಪಿ ಅಣ್ಣಪ್ಪ ಮತ್ತು 4ನೇ ಆರೋಪಿ ಸುರೇಶ ಇವರು ನನ್ನ ಕೈ ಹಿಡಿದು ಕುತ್ತಿಗೆ ಹಿಚುಕಿದರು. 6 ನೇ ಆರೋಪಿ ಸುಶೀಲಾ ಇವರು ಬಂದು ನನ್ನ ಗುಪ್ತಾಂಗನ ಹಿಡಿದು ಹಿಚುಕಿದರು. ನಾನು ಪ್ರಜ್ಞೆ ತಪ್ಪಿದೆನು. ಹೊರಗಡೆ ಓಡಾಡುತ್ತಿದ್ದ ಜನರು ಬಂದು ನನಗೆ ಬಿಡಿಸಿದರು. ಚಾಸಾಃ 6 ಫಿರೋಜ ಚೌಗುಲಾ ಮತ್ತು ಚಾಸಾಃ 7 ಭೈರಪ್ಪ ಇವರು ಬಂದು ಬಿಡಿಸಿದರು. ಜಗಳ ಬಿಡಿಸಿ, ಆರೋಪಿತರನ್ನು ಕಳುಹಿಸಿದರು. 2 – 3 ನಿಮೀಷಗಳ ನಂತರ ನನಗೆ ಪ್ರಜ್ಞೆ ಬಂತು. ಆ ದಿನ ನಾನು ದೂರನ್ನು ನೀಡಿರುವುದಿಲ್ಲ. ಮರು ದಿನ ಅಂದರೆ ದಿನಾಂಕಃ 02-10-2015 ರಂದು ನಾನು ಕುಡಚಿ ಪೋಲಿಸ ಠಾಣೆಗೆ ಹೋಗಿ ದೂರನ್ನು ನೀಡಿದ್ದೇನೆ. ದೂರನ್ನು ನಿಪಿ-5 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-5 [ಎ] ಎಂದು ಗುರುತಿಸಲಾಯಿತು.

5. ಘಟನೆ ನಂತರ ನಾನು ಕುಡಚಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು, ಆ ನಂತರ ಪೋಲಿಸ ಠಾಣೆಗೆ ಹೋಗಿ ದೂರನ್ನು ನೀಡಿದ್ದೇನೆ. ಪ್ರಥಮ ವರ್ತಮಾನ ವರದಿಯ ಮೇಲೆ ಇರುವ ತನ್ನ ಸಹಿ ಸಾಕ್ಷಿ ಗುರುತಿಸಿದ್ದಾರೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ–6 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–6 [ಎ] ಎಂದು ಗುರುತಿಸಲಾಯಿತು.

6. ದೂರು ನೀಡಿದ ನಂತರ ಪೋಲಿಸರು ಬಂದಿದ್ದರು. ಪೋಲಿಸರಿಗೆ ನಮ್ಮ ಊರಿನ ಜನರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದಾರೆ. ನಾನು ಸಹ ಅಲ್ಲಿ ಹೋಗಿದ್ದೆನು. ನಾನು ಪೋಲಿಸರಿಗೆ ನನ್ನ ಪಾನ್ ಶಾಪ ಮತ್ತು ಟೇಲರ ಅಂಗಡಿಯನ್ನು ತೋರಿಸಿದ್ದೇನೆ. ಸಾಕ್ಷಿಯು ಮುಂದುವರೆದು ನಮ್ಮ ಊರಿನ ಹಿರಿಯರು ಪೋಲಿಸರಿಗೆ ಸ್ಥಳ ತೋರಿಸಿದ್ದರು ಎಂದು, ಹಿರಿಯರು ನನಗೆ ಪೋನ ಮಾಡಿದ್ದರು ಎಂದು, ನಾನು ಜಾಗ ತೋರಿಸಿ ವಾಪಸ್ಸು ಬಂದಿದ್ದೇನೆ ಎಂದು ಹೇಳಿದ್ದಾರೆ. ಡಿ. ವೈ. ಎಸ್.ಪಿ. ರವರು ನನ್ನ ಹೇಳಿಕೆಯನ್ನು ತೆಗೆದುಕೊಂಡಿದ್ದಾರೆ.

**ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.